Sri D. PARAMESWARAPPA.—The Survey work commenced just about six months ago and it is going on.

Sri H. N. NANJE GOWDA.—May I know the stage of Survey of the said project and may I know the approximate irrigable area if the project is completed.

Sri D. PARAMESWARAPPA.—Unless the survey is completed, it is not possible to give all these details.

ಶ್ರೀ ಎನ್. ಎಲ್. ಬೆಲ್ಲದ್.—ಸರ್ಕಾರದ ಉತ್ತರ ನೋಡಿದರೆ ಬಹಳ ವಿಷಾದ ಅನಿಸುತ್ತದೆ ಏಕೆಂದರೆ ಧಾರವಾಡ, ಬಿಜಾಪುರ ಮತ್ತು ರಾಯಚೂರು ಜಿಲ್ಲೆಗಳಿಗೆ ಈ ಯೋಜನೆಯಿಂದ ನೀರಾವರಿಯಾಗುತ್ತದೆ. ಸರ್ಕಾರದವರು ಈ ಯೋಜನೆಯನ್ನು ಕೈಕೊಳ್ಳುತ್ತಾರೆ ಎಂದು ಸಾಮಾನ್ಯ ಜನ ಅಪೇಕ್ಷೆ ಮಾಡುತ್ತಾ, ಇರುವ ಪರಿಸ್ಥಿತಿಯಲ್ಲಿ ಈ ತರಹ ಉತ್ತರ ಕೊಡುತ್ತಾ ಇದ್ದೀರಿ. ಇದೇ ಮನೆಯಲ್ಲ ಹೇಳಿದ ಪ್ರಕಾರ ಬೈರೆಂಪಾಡ ಯೋಜನೆ ಕಾರ್ಯ ಮಾರ್ಚ್ 1968ಕ್ಕೆ ಮುಗಿಯುತ್ತದೆ ಎಂದು ಹೇಳಿದ್ದಿರಿ ಅದು ಎಲ್ಲಿಗೆ ಬಂದಿದೆ ?

ಶ್ರೀ ಡಿ. ಪರಮೇಶ್ವರಪ್ಪ.—ಇದು ಅಪ್ಪರ್ ತುಂಗಾಕ್ಕೆ ಸಂಬಂಧಿಸಿದ ಯೋಜನೆ.

ಶ್ರೀ ಎನ್. ಎಲ್. ಬೆಲ್ಲದ್.—ಇದು ನಾಲ್ಕು ಜಿಲ್ಲೆಗಳಿಗೆ ಸಂಬಂಧಪಟ್ಟ ಯೋಜನೆ ಆದ್ದರಿಂದ ನಿರ್ದಿಷ್ಟವಾದ ಉತ್ತರ ಕೊಟ್ಟರೆ ತೃಪ್ತಿಕರವಾಗಿರುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಎಂ. ಜಿ. ಬಣಕಾರ್.—ಬೈರಂಪಾಡ ಮತ್ತು ಗಾಜನೂರು ಈ ಎರಡೂ ಅಪ್ಪರ್ ತುಂಗಾಕ್ಕೆ ಸಂಬಂಧಪಟ್ಟದ್ದು, ಸರ್ವೆ ಕಾರ್ಯ ನಡೆದಿದೆ, ಮಾರ್ಚ್ 1968 ಕ್ಕೆ ಮುಕ್ತಾಯವಾಗುತ್ತದೆ ಎಂದು ಈ ಮನೆಯಲ್ಲಿ ಹಿಂದೆ ಉತ್ತರ ಕೊಟ್ಟಿದ್ದಾರೆ. ಗಾಜನೂರಾಗಲಿ ಬೈರಂಪಾಡ ಆಗಲಿ ಅಪ್ಪರ್ ತುಂಗಾಕ್ಕೆ ಬಿಟ್ಟಿದ್ದಲ್ಲ. ಅದಕ್ಕೆ ಒಳಪಟ್ಟಿದೆ. ಆದ್ದರಿಂದ ಈ ಸರ್ವೆ ಕಾರ್ಯ ಎಲ್ಲಿಗೆ ಮುಗಿಯುತ್ತದೆ ಎಂಬುದನ್ನು ಹೇಳಬೇಕು ಮಾರ್ಚ್ 1968 ರಲ್ಲಿ ಮುಕ್ತಾಯವಾಗಿಲ್ಲ.

ಶ್ರೀ ಡಿ. ಪರಮೇಶ್ವರಪ್ಪ.—ಸರ್ವೆ ಕಾರ್ಯ 1968 ಮಾರ್ಚ್‌ಯಲ್ಲಿ ಮುಕ್ತಾಯವಾಗುತ್ತದೆ ಎಂದು ಯಾವ ಸಂದರ್ಭದಲ್ಲಿ ಹೇಳಿದ್ದಾರೋ ಕಾಣೆ. ಏಕೆಂದರೆ ಸರ್ವೆ ಕಾರ್ಯ ಮುಗಿಯುವುದಕ್ಕೆ ಟೈಂ ಎಷ್ಟಾಗುತ್ತದೆ ಎಂದು ನಿರ್ದಿಷ್ಟವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅದಷ್ಟು ಅನಕ್ಕೆ ವಹಿಸಿ ಪೂರ್ತಿಯಾಗಿ ಸರ್ವೆ ಆಗಬೇಕೆಂದು ಸರ್ವೆ ಕಾರ್ಯ ಮಾಡಿಸುತ್ತಾ ಇದ್ದೇವೆ.

Amount provided in the Budget towards upliftment of Harijans and Girijans

710. Smt. CHAMPA BAI BHOGALE (Kagwad).—

Will the Minister for Social Welfare be pleased to state :—

the amount provided towards upliftment of Harijans and Girijans in the Budget for the year 1967-68 together with the amount spent and the amount unspent ?

Sri V. L. PATIL (Minister for Social Welfare).—

The amount is provided towards upliftment of Harijans and Girijans in the budget for the year 1967-68.

(SRI V. L. PATIL)

The amount spent and the amount unspent are as follows :—

(in lakhs)

1967-68	Amount provided	Amount spent	Amount unspent
State Plan—			
Harijans upliftment	31.61	30.37	1.24
Girijan upliftment	7.025	5.739	1.286
Central Plan—			
Harijan Upliftment	18.425	17.661	0.764
Girijan Upliftment	5.200	3.340	1.860
Non-Plan items.—			
Harijan Upliftment	73.927	67.001	6.926
Girijan Upliftment	8.024	8.373	...

ಶ್ರೀಮತಿ ಚಂಪಾಬಾಯಿ ಭೋಗರೆ.—31 ಲಕ್ಷ 61 ಸಾವಿರ ರೂಪಾಯಿಗಳಲ್ಲಿ ಯಾವ ಯಾವ ಡಿಸ್ಟ್ರಿಕ್ಟ್‌ಗೆ ಎಷ್ಟೆಷ್ಟು ಮಂಜೂರು ಮಾಡಿದ್ದೀರಿ, ಎಷ್ಟೆಷ್ಟು ಲ್ಯಾಪ್ಸ್ ಆಗಿದೆ ಎಂಬುದನ್ನು ತಿಳಿಸುತ್ತೀರಾ ?

† ಶ್ರೀ ವಿ. ಎಲ್. ಪಾಟೀಲ್.—ಡಿಸ್ಟ್ರಿಕ್ಟ್‌ವೈಸ್ ಅಂಕಿಅಂಶ ನನ್ನ ಹತ್ತಿರ ಇಲ್ಲ.

ಶ್ರೀಮತಿ ಚಂಪಾಬಾಯಿ ಭೋಗರೆ.—ಈ ಹಣ ಯಾವ ಯಾವ ಯೋಜನೆ ಸಲುವಾಗಿ ಖರ್ಚು ಮಾಡಿದ್ದೀರಿ ?

ಶ್ರೀ ವಿ. ಎಲ್. ಪಾಟೀಲ್.—ಅದು 1967-68ನೇ ಸಾಲಿನ ಬಜೆಟ್‌ನಲ್ಲಿ ಇದೆ. ಸ್ಟೇಟ್ ಪ್ಲಾನ್, ಸೆಂಟ್ರಲ್ ಪ್ಲಾನ್ ಮತ್ತು ನಾನ್ ಪ್ಲಾನ್ ಐಟಂ ಎಷ್ಟು ಎಂಬುದನ್ನು ಇಲ್ಲಿ ಕೊಟ್ಟಿದ್ದೇವೆ.

ಶ್ರೀಮತಿ ನಾಗಮ್ಮ.—ಒಂದು ಲಕ್ಷ 24 ಸಾವಿರ ರೂಪಾಯಿ ಲ್ಯಾಪ್ಸ್ ಆಗಿದೆ ಎಂದು ಹೇಳಿದ್ದೀರಿ, ಯಾವ್ಯಾವ ಡಿಸ್ಟ್ರಿಕ್ಟ್‌ನಲ್ಲಿ ಎಷ್ಟೆಷ್ಟು ಹಣ ಲ್ಯಾಪ್ಸ್ ಆಗಿದೆ. ಯಾತರ ಸಲುವಾಗಿ ಖರ್ಚು ಮಾಡಿಲ್ಲ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ವಿ. ಎಲ್. ಪಾಟೀಲ್.—ಡಿಸ್ಟ್ರಿಕ್ಟ್ ವೈಸ್ ಅಂಕಿಅಂಶ ಬೇಕೆಂದರೆ ಕೊಡಬಹುದು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸಮಾಜ ಕಲ್ಯಾಣ ಇಲಾಖೆಗೆ ಹಣವನ್ನು ಅರಾಟ್ ಮಾಡುವುದರಲ್ಲಿ ಅವರೋಹಣ ನೀತಿಯನ್ನೂ ಮತ್ತು, ಹಾಗೆ ಅರಾಟಾದ ಹಣವನ್ನು ಖರ್ಚು ಮಾಡದೆ ಉದನ್ನು ಲ್ಯಾಪ್ಸ್ ಮಾಡುವುದರಲ್ಲಿ ಅರೋಹಣ ನೀತಿಯನ್ನೂ ಸರ್ಕಾರದವರು ಪ್ರತಿ ವರ್ಷವೂ ಅನುಸರಿಸುತ್ತಿದ್ದಾರಲ್ಲವೇ ?

ಶ್ರೀ ವಿ. ಎಲ್. ಪಾಟೀಲ್.—ಸರ್ಕಾರದಲ್ಲಿ ಆ ತರಹೆಯ ನೀತಿಯೇನಿಲ್ಲ. ಇದರಲ್ಲಿ ಮೂರು ಬಾಬುಗಳು ಸೇರಿವೆ. ಒಂದು ಸ್ಟೇಟ್ ಗ್ರಾಂಟ್, ಇನ್ನೊಂದು ಸೆಂಟ್ರಲ್ ಗ್ರಾಂಟ್ ಮತ್ತು ನಾನ್ ಪ್ಲಾನ್ಡ್ ಗ್ರಾಂಟ್ ಇಷ್ಟೆಲ್ಲಾ ಸೇರಿದೆ. ಆದರೆ ನಮಗೆ ತಜ್ಞರ ಕೊರತೆಯಿಂದ ಕೆಲವು ಶಾಲಾಕಟ್ಟಡಗಳೂ ಮತ್ತು ಹಾಸ್ಟಲುಗಳ ಕೆಲಸ ನಡೆಯಲಿಲ್ಲ. ಅದರಿಂದ ಹಣ ಲ್ಯಾಪ್ಸಾಗಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ಬಾಬಿನಲ್ಲಿ ಸುಮಾರು 12 ಲಕ್ಷ ಹಣ ಲ್ಯಾಪ್ಸಾಗಿರುವುದರಿಂದ ಇದರಲ್ಲಿ ಏನು ಲ್ಯಾಕ್ಯೂನಾ ಇದೆ ಎಂಬುದನ್ನು ಪರಿಶೀಲಿಸಿ ಸರ್ಕಾರಕ್ಕೆ ಒಂದು ವರದಿ ಒಪ್ಪಿಸಲು ಈ ಸಭೆಯ ಸದಸ್ಯರಿಂದ ಒಳಗೊಡಿದ ಒಂದು ಸಮಿತಿಯನ್ನು ಸರ್ಕಾರದವರು ನೇಮಕ ಮಾಡುತ್ತಾರೆಯೇ ?

ಶ್ರೀ ವಿ. ಎಲ್. ಪಾಟೀಲ್.—ಈ ವಿಚಾರ ಈಗಾಗಲೆ ಎರಡು ಮೂರಾವರ್ತಿ 1966 ಮತ್ತು 1967 ರಲ್ಲಿ ಇದೇ ಅಸೆಂಬ್ಲಿಯ ಮುಂದೆ ಬಂದು ಚರ್ಚೆಯಾಗಿ ಹೋಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಇಷ್ಟು ಭಾರಿ ಮೊತ್ತದ ಹಣ ಲ್ಯಾಪ್ಸಾಗುವುದಕ್ಕೆ ಅಧಿಕಾರಿಗಳು ಕಾರಣರೋ ಅಥವಾ ಯಾರು ಕಾರಣರು ?

ಶ್ರೀ ವಿ. ಎಲ್. ಪಾಟೀಲ್.—ಅದಕ್ಕೆ ಎರಡು ಮೂರು ಕಾರಣಗಳಿವೆ. ಅವುಗಳನ್ನಾಗಲೇ ನಾನು ತಿಳಿಸಿದೆ.

ಶ್ರೀ ಕೆ. ಎಚ್. ಪಾಟೀಲ್.—ಈ ಹಾಸ್ಟಲುಗಳನ್ನು ಕಟ್ಟುವುದಕ್ಕೆ ಜನರಿಂದ ವಂತಿಕೆಯನ್ನು ಪಡೆದುಕೊಂಡಿದ್ದರೂ ಸರ್ಕಾರದವರು ತಮ್ಮ ಭಾಗದ ಗ್ರಾಂಟನ್ನು ಕೊಡದೆ ಈ ಹಾಸ್ಟಲುಗಳ ಕಾರ್ಯ ನಿಂತಿರುವುದರಿಂದ ಇದಕ್ಕೆ ಕಾರಣ ಸರ್ಕಾರದವರ ಕರ್ತವ್ಯಾಭಾವವೇ ಅಲ್ಲವೇ ?

ಶ್ರೀ ವಿ. ಎಲ್. ಪಾಟೀಲ್.—ಹಾಗೇನೂ ಇಲ್ಲ. ಆ ರೀತಿ ಕೊಡುವುದಕ್ಕೆ ಕೆಲವು ತೊಂದರೆಗಳಿವೆ. ಎಲ್ಲೆಲ್ಲಿ ಹಾಸ್ಟಲುಗಳು ಮಂಜೂರಾಯಿತೋ ಅಲ್ಲಿ ಅಂತಹ ಅನಾನುಕೂಲವಿದ್ದುದರಿಂದ ಅವು ಇನ್ನೂ ಖರ್ಚಾಗದೆ ಉಳಿದಿವೆ.

ಶ್ರೀ ಎಂ. ಮುಂಜೇಗೌಡ.—ಅಪಾರ ಸಂಖ್ಯೆಯಲ್ಲಿ ಹರಿಜನರು ಇರುವುದರಿಂದ ಅವರ ಅಭಿವೃದ್ಧಿ, ಬೆಳವಣಿಗೆ ಆಗಬೇಕಾಗಿರುವುದರಿಂದ, ಈಗಿರತಕ್ಕ ಹಣ ಈ ರೀತಿ ಲ್ಯಾಪ್ಸ್ ಆದರೆ ಅವರ ಅಭಿವೃದ್ಧಿಗೆ ಚ್ಯುತಿ ಬರುವುದಿಲ್ಲವೇ ? ಆದ್ದರಿಂದ ಇನ್ನು ಮುಂದೆ ಈ ರೀತಿ ಆಗದ ಹಾಗೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಹೋದಸಾರಿ 1967-68ರಲ್ಲಿ ಚರ್ಚೆಯಾಗಿದೆ. ಮುಂದಿನ ಸಾರಿ ಸಾಧ್ಯವಾದಷ್ಟು ಕ್ರಮ ತೆಗೆದುಕೊಂಡು ಲ್ಯಾಪ್ಸ್ ಆಗುವುದಕ್ಕೆ ಅವಕಾಶಕೊಡುವುದಿಲ್ಲವೆಂದು ಹೇಳಿದ್ದೇನೆ.

ಶ್ರೀ ಕೆ. ಎಂ. ತಮ್ಮಯ್ಯ.—ಈ ರೀತಿ ಹಣ ವರ್ಷೇ ವರ್ಷೇ ಲ್ಯಾಪ್ಸ್ ಆಗುತ್ತಾ ಇರುವುದಕ್ಕೆ ಅಲ್ಲಿನ ಅಧಿಕಾರಿಗಳು ಕೆಲಸಮಾಡದೇ ಇರುವುದು, ಸರಿಯಾದ ವೇಳೆಯಲ್ಲಿ ಸರ್ಕಾರಕ್ಕೆ ಶಿಫಾರಸು ಮಾಡದೇ ಇರುವುದು, ಮತ್ತು ಶಿಫಾರಸು ಮಾಡುವಾಗ, ರಿವೆಂಜ್ ಮೇಲೆ ಮಾಡುವುದೂ ಒಂದು ಕಾರಣವಲ್ಲವೇ ?

ಶ್ರೀ ವಿ. ಎಲ್. ಪಾಟೀಲ್.—ಅದು 1967-68 ರಲ್ಲಿ ಆಗಿದೆ. ಆದಾದನಂತರ ಅದನ್ನು ಸರಿಪಡಿಸಲಾಗಿದೆ.

ಶ್ರೀ ವಿ. ಎನ್. ಪಾಟೀಲ್.—ಉತ್ತರದಲ್ಲಿ ಸುಮಾರು 12 ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗಿದೆಯೆಂದು ಹೇಳಿದೆ. ತಮ್ಮ ಪಾಲಿನ ಇದನ್ನು ಹರಿಜನರ ಉದ್ಧಾರಕ್ಕಾಗಿ ಇಟ್ಟಿದ್ದೇವೆಂದು ಹೇಳುತ್ತೀರಿ. ಯಾವ ಅಧಿಕಾರಿ ಹೀಗೆ ಪೂರ್ತಿ ಹಣ ಲ್ಯಾಪ್ಸ್ ಆಗುವುದಕ್ಕೆ ಜವಾಬ್ದಾರಿಯಾಗಿರುತ್ತಾನೋ ಅಂತಹ ಅಧಿಕಾರಿಯ ಬಗ್ಗೆ ಉಗ್ರ ಕ್ರಮ ತೆಗೆದುಕೊಳ್ಳಬೇಕು. ಎರಡನೇ ಸಾರಿ ಈ ಬಾಬಿಗೆ ಹಣವನ್ನು ಕೊಡುವಾಗ ಲ್ಯಾಪ್ಸ್ ಆಗಿರುವುದನ್ನು ಕೂಡಿಸಿ ಖರ್ಚುಮಾಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಇದರಲ್ಲಿ ಕೇವಲ ಅಧಿಕಾರಿಗಳೇ ಜವಾಬ್ದಾರರಲ್ಲ. ಕಾರ್ಯಕರ್ತರು, ಸರ್ಕಾರದ ಅಧಿಕಾರಿಗಳು ಎಲ್ಲರೂ ಜವಾಬ್ದಾರರು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಕೆಲವು ತೊಂದರೆಗಳಿಂದ ಕಟ್ಟಡ ಕಟ್ಟಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಆ ಕಷ್ಟಗಳು ಯಾವುವು ? ಹಾಸ್ಟಲ್ ಕಟ್ಟುವುದಕ್ಕೆ ದುಡ್ಡು, ಜಾಗ ಕೊಟ್ಟರೆ ಅವಕಾಶ ಕಲ್ಪಿಸಿಕೊಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಅಂತಹ ಅನುಕೂಲಗಳಿದ್ದರೆ, ಹಾಸ್ಟಲ್ ಕಟ್ಟಬಹುದು.